**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.20.08.2024**

## ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ.ಡಿ ಎಲ್ ಕೆ ವಕೀಲರಿಂದಃ

1. ನನ್ನ ನೈಸರ್ಗಿಕ ತಂದೆಯ ಹೆಸರು ಬಚ್ಚಣ್ಣ ಮತ್ತು ತಾಯಿಯ ಹೆಸರು ಮುನಿಯಮ್ಮ. ಸದರಿಯವರು ದೊಡ್ಡಬಳ್ಳಾಪುರ ತಾಲ್ಲೂಕು, ಮಾಚಗೌಡನಹಳ್ಳಿ ಗ್ರಾಮದವರು. ನಾನು ತಮ್ಮಣ್ಣ ಮತ್ತು ಗೌರಮ್ಮ ರವರ ದತ್ತು ಮಗ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ನೊಂದಣಿ ದತ್ತು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಈಗ ಕಡತದಲ್ಲಿ ಸದರಿ ನೊಂದಣಿ ದತ್ತು ಪತ್ರವನ್ನು ತೋರಿಸುವಂತೆ ಕೇಳಿದಾಗ ಸಾಕ್ಷಿ ಸದರಿ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನೊಂದಣಿ ದತ್ತು ಪತ್ರವನ್ನು ಇದುವರೆಗೂ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನನ್ನು ತಮ್ಮಣ್ಣ ಮತ್ತು ಗೌರಮ್ಮ ರವರು 1974 ಅಥವಾ 1975 ರಲ್ಲಿ ನೊಂದಣಿ ಆಗಿರಬಹುದು, ಆದರೆ ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ. ಪತ್ರವನ್ನು ಹಾಜರು ಪಡಿಸುತ್ತೇನೆ.

2. ತಮ್ಮಣ್ಣ ಮತ್ತು ಗೌರಮ್ಮ ರವರು ನನ್ನನ್ನು ಯಾವತ್ತೂ ಸಹ ದತ್ತು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮುನ್ಸಿಪಾಲಿಟಿ ಅಸ್ತಿ ಆಗಿರುತ್ತದೆ. ತಮ್ಮಣ್ಣ ರವರು ದಾವಾ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಬಳಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ನೊಂದಣಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವ ನೊಂದಣಿ ದಾಖಲೆಗಳು ಇರುತ್ತದೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಎ ಮತ್ತು ಬಿ ಷೆಡ್ಯೂಲ್ ಆಸ್ತಿಗಳ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ, ಪಶ್ಚಿಮ-68 ಅಡಿಗಳು ಮತ್ತು ಉತ್ತರ, ದಕ್ಷಿಣ-120 ಅಡಿಗಳು ಇರುತ್ತದೆ. ಸದರಿ ವಿಸ್ತೀರ್ಣವು ಎರಡೂ ಆಸ್ತಿಗಳನ್ನು ಒಳಗೊಂಡಿರುತ್ತದೆ. ಸದರಿ ಆಸ್ತಿಯು ಸರ್ವೆ ನಂ.82 ಕ್ಕೆ ಸಂಬಂದಪಟ್ಟ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯು ಭೂ ಪರಿವರ್ತನೆ ಆಗಿರುತ್ತದೆ. ಆದರೆ ಯಾವ ವರ್ಷದಲ್ಲಿ ಭೂ ಪರಿವರ್ತನೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

3. ಆ ರೀತಿ ಭೂ ಪರಿವರ್ತನೆ ಮಾಡಿಸಿಕೊಳ್ಳಲು ಯಾವ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಿದ್ದೇವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ಎಸ್ ಡಿ ಒ ಆಧಾರದಲ್ಲಿ ಮಂಜೂರು ಮಾಡಿದ್ದಾರೆ. ಸದರಿ ಎಸ್ ಡಿ ಒ ಪತ್ರ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಅದನ್ನು ಮುಂದಿನ ಸುನಾವಣೆ ದಿನಾಂಕದಂದು ತಂದು ಹಾಜರು ಪಡಿಸುತ್ತೇನೆ.

ಮನೆಗೆ ಅಳವಡಿಸಲಾಗಿದ್ದ ನಲ್ಲಿಯನ್ನು 1 ನೇ ಪ್ರತಿವಾದಿ ಕಿತ್ತು ಹಾಕಿದ್ದು ಅದರ ಬಗ್ಗೆ ಪುರಸಭೆಗೆ ಅರ್ಜಿಯನ್ನು ನೀಡಿದ್ದು, ಯಾವುದೇ ಕ್ರಮ ಜರುಗಿಸದೇ ಇರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಶೌಚಾಲಯ ಕಟ್ಟಿಸಲು ಪುರಸಭೆಯಿಂದ ಪರವಾನಿಗೆ ಪಡೆದಿರುವುದಿಲ್ಲ. ಸದರಿ ಶೌಚಲಾಯಕ್ಕೆ ನಲ್ಲಿಯನ್ನು ಒದಗಿಸಲು ಪುರಸಭೆಗೆ ಅರ್ಜಿಯನ್ನು ಕೊಟ್ಟಿದ್ದೆ, ಸದರಿ ಅರ್ಜಿಯ ಪ್ರತಿ ಈಗ ಇದೆಯೋ ಇಲ್ಲವೋ ಎಂದು ದಾಖಲೆ ನೋಡ ಬೇಕಾಗಿರುತ್ತದೆ.

4. ನಮ್ಮ ಸ್ವಾದೀನಕ್ಕೆ 2 ನೇ ಪ್ರತಿವಾದಿ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ವಿರುದ್ದ ವಿಜಯಪುರ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. 2 ನೇ ಪ್ರತಿವಾದಿ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಶೌಚಾಲಯವನ್ನು ಕಟ್ಟಿದ್ದ ಕಾರಣ 1 ನೇ ಪ್ರತಿವಾದಿ ಕಿತ್ತು ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ಕಾರಕ್ಕೆ ಸೇರಿದ್ದು ನಮಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**